ಕೂಡ ಆ ಕ್ಷಣದ ಅವಳ ಮುಖ ನೆನಪಾದರೆ ನನಗೆ ಅಂಜಿಕೆಯಾಗುತ್ತದೆ. ಅವಳ ಕಣ್ಣೆವೆಗಳು ಅರೆಮುಚ್ಚಿದ್ದವು. ಮೇಲ್ದುಟಿಯ ಮೇಲೆ ಕರಿನೆರಳಿತ್ತು ಮತ್ತು ಅಂತಹ ಚಳಿಯಲ್ಲೂ ಅವಳ ತುಟಿಗಳ ಮೇಲೆ ಸಾಲಾಗಿ ಬೆವರಿನ ಮಣಿಗಳಿದ್ದವು. ಕೈಗಳು ಹಿಮದಂತೆ ತಣ್ಣಗಾಗಿದ್ದವು ಆದರೆ ಚರ್ಮವಿಲ್ಲದ ಕೈಗಳಂತೆ ಅಂಟಾಗಿದ್ದವು. ಅವಳು ಶಾಲು ಹೊದ್ದು ಕೊಂಡಿದ್ದಳು. ಅವಳ ಚಂದದ ಕುರ್ತಾದಲ್ಲಿ ಅವಳ ದೇಹ ಹಿಟ್ಟಿನ ಮುದ್ದೆಯಂತೆ ಹೊಳೆಯುತ್ತಿತ್ತು. ಕುರ್ತಾದ ಚಿನ್ನದ ಬಣ್ಣದ ಗುಬ್ಬಿಗಳು ತೆರೆದಿದ್ದವು.

ಆಗ ಸಂಜೆಯ ಹೊತ್ತು, ಕೋಣೆಯಲ್ಲಿ ಕತ್ತಲು ಆವರಿಸಲಾರಂಭಿಸಿತ್ತು. ಏನೋ ಒಂದು ವಿಚಿತ್ರ ರೀತಿಯ ಭಯ ನನ್ನನ್ನು ಆವರಿಸಿಕೊಂಡಿತು. ಬೇಗಮ್ ಜಾನ್‌ಳ ವಿಶಾಲವಾದ ಕಣ್ಣುಗಳು ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದವು. ನನಗೆ ಅಳುವೇ ಬಂದಿತು. ನಾನೊಬ್ಬ ಮಣ್ಣಿನ ಗೊಂಬೆ ಎನ್ನುವಂತೆ ಅವಳು ನನ್ನನ್ನು ಒತ್ತಿ ಹಿಂಡುತ್ತ ಇದ್ದಳು. ಅವಳ ಬೆಚ್ಚಗಿನ ಮೈಯ ವಾಸನೆ ವಾಕರಿಕೆ ಬರಿಸುವಂತಿತ್ತು. ಆದರೆ, ಅವಳು ಮಾತ್ರ ಮೈಮೇಲೆ ಬಂದಂತಿದ್ದಳು. ನನಗೆ ಅಳುವುದಕ್ಕೆ, ಕಿರುಚುವುದಕ್ಕೆ ಆಗಲೇ ಇಲ್ಲ.

ಸ್ವಲ್ಪ ಹೊತ್ತಿನ ನಂತರ ಅವಳು ನನ್ನನ್ನು ಬಿಟ್ಟು ಸುಸ್ತಾಗಿ ಹಿಂದಕ್ಕೆ ಒರಗಿದಳು. ಏದುಸಿರು ಬಿಡುತ್ತಿದ್ದಳು. ಅವಳ ಮುಖ ಕಳೆ ಇಲ್ಲದೆ ನಿಸ್ತೇಜವಾಗಿತ್ತು. ಅವಳು ಸತ್ತೇ ಹೋಗುತ್ತಾಳೆ ಎಂದು ಕೊಂಡ ನಾನು ಕೋಣೆಯಿಂದ ಹೊರಗೆ ಓಡಿ ಬಿಟ್ಟೆ.

ದೇವರ ದಯೆ! ರಬ್ಬು ಆವತ್ತು ರಾತ್ರಿ ಹಿಂತಿರುಗಿದಳು. ಭಯದಿಂದಲೇ ನಾನು ಬೇಗನೆ ಮಲಗಲು ಹೋಗಿ ರಜಾಯಿಯನ್ನು ಮುಖದ ಮೇಲೆ ಎಳೆದುಕೊಂಡೆ. ಗಂಟೆಗಟ್ಟಲೆ ನಿದ್ದೆಯೇ ಬರಲಿಲ್ಲ.

ಆಗ್ರಾದಿಂದ ಹಿಂತಿರುಗಿ ಬರಲು ಅಮ್ಮ ಎಷ್ಟು ತಡ ಮಾಡುತ್ತಿದ್ದಾಳೆ! ನನಗೆ ಬೇಗಮ್ ಜಾನ್ ಎಂದರೆ ಎಷ್ಟು ಭಯವಾಗಿತ್ತು ಅಂದರೆ ಆವತ್ತಿಡೀ

